# ತತ್ವಪದಕಾರ ಲಿಂಗಯ್ಯನವರ ತತ್ವಪದಗಳ ಜೀವಾಳ

**ಬೋರಯ್ಯ ಪಿ. ಕೆ.**

ಸಂಶೋಧನಾ ವಿದ್ಯಾರ್ಥಿ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**Received: 10/09/2024 ; Acepted: 02/10/2024 ; Published: 05/11/2024**

**DOI: https://doi.org/10.5281/zenodo.14034913**

## ABSTRACT:

ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಹಾಗೂ ವೇದ ಉಪನಿಷತ್ತುಗಳಿಂದ ಪ್ರಭಾವಿತರಾದ ಲಿಂಗಯ್ಯನವರು ತತ್ವಪದಕಾರರಾಗಿ, ವೇದಾಂತಿಗಳಾಗಿ, ಒಬ್ಬ ಆದರ್ಶ ಶಿಕ್ಷಕರಾಗಿ, ಕವಿಗಳಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಗುರುತಿಸಿಕೊಂಡಿದ್ದಾರೆ. ಇವರು ಆಧ್ಯಾತ್ಮಿಕ ಕಥೆಗಳು, ನಾಟಕ, ಜೀವನ ಚರಿತ್ರೆ, ಸಾವಿರಾರು ತತ್ವಪದಗಳನ್ನು ಬರೆದು, ಸಾಮಾಜಿಕ ವ್ಯವಸ್ಥೆಯಲ್ಲಿ ಬಡವರಿಗೆ ಆಗುತ್ತಿರುವ ಅನ್ಯಾಯಗಳ ವಿರುದ್ಧ ಹೋರಾಟವನ್ನು ಮಾಡುವುದರ ಮೂಲಕ ಜನರಲ್ಲಿ, ಶಾಂತಿ ಸಾಮರಸ್ಯದ ಬೆಳಕನ್ನು ಚೆಲ್ಲವುದರ ಕಡೆಗೆ ಮುಖ ಮಾಡಿ ಚಲಿಸಿದ್ದೆ ಅಪಾರ. ವೈದಿಕರನ್ನು ಮತ್ತು ವೈದಿಕತೆಯನ್ನು ತನ್ನ ಅಂತರಂಗದಿಂದಲೇ ಗ್ರಹಿಸಿ, ಅವರ ಆಚರಣೆಗಳನ್ನು ಪ್ರಶ್ನಿಸಿ, ಅವರು ತಮ್ಮ ತತ್ವಪದಗಳಲ್ಲಿ ವಿಶ್ಲೇಷಿಸಿರುವುದು ಗಮನಾರ್ಹ. ಹಾಗೆಯೇ ಸಮಾಜದಲ್ಲಿ ಅನೇಕ ರೀತಿಯ ಆಚರಣೆಗಳಲ್ಲಿ ಜಾತಿ, ಮತ, ಮಡಿ–ಮೈಲಿಗೆ ಎಂಬಂತಹ ಆಚರಣೆಗಳನ್ನು ಕುರಿತು ಲಿಂಗಯ್ಯನವರು ಕಟುವಾಗಿ ಟೀಕಿಸಿದ್ದಾರೆ ಹಾಗೂ ಬಡತನದ ಬಗ್ಗೆ ಅವರಿಗೆ ಇದ್ದ ನಿಲುವುಗಳನ್ನು ತತ್ವಪದಗಳಲ್ಲಿ ವಿಮರ್ಶಿಸಿದ್ದಾರೆ.

## KEYWORDS:

ತತ್ವಪದ, ವೈದಿಕತೆ, ಮಡಿ–ಮೈಲಿಗೆ, ಬಡತನ, ಅಸಮಾನತೆ.

ಕೆ. ಲಿಂಗಯ್ಯನವರು ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲ್ಲೂಕಿನ ತುರುವನೂರು ಗ್ರಾಮದಲ್ಲಿ 06/11/1905ರಲ್ಲಿ ಹುಟ್ಟಿದರು. ಇವರ ತಂದೆ ವೀರಪ್ಪ ತಾಯಿ ಮಲ್ಲಮ್ಮ. ಇವರು ಕತೆ, ನಾಟಕ, ಷಟ್ಪದಿ, ರಗಳೆ, ಶತಕ, ತ್ರಿಪದಿ, ಕಂದ ಪದ್ಯಗಳು, ವಚನಗಳು, ತತ್ವಪದಗಳು, ಪುರಾಣ, ಪುಣ್ಯ ಪುರುಷರ ಜೀವನ ಚರಿತ್ರೆಗಳು, ಆಧ್ಯಾತ್ಮಿಕ ಕಥೆಗಳು ಹೀಗೆ ಹತ್ತು ಹಲವು ಪ್ರಕಾರಗಳಲ್ಲಿ ಅನನ್ಯವಾದ ಸಾಹಿತ್ಯವನ್ನು ರೂಪಿಸಿದ್ದಾರೆ. ಈ ಸಾಹಿತ್ಯ ಪ್ರಕಾರಗಳಲ್ಲಿ ತತ್ವಪದ ಸಾಹಿತ್ಯ ಮುಖ್ಯ ಪ್ರಕಾರವಾಗಿದೆ. ವಿದ್ವಾಂಸರ ಪ್ರಕಾರ ಇವರು ಒಂದು ಸಾವಿರಕ್ಕೂ ಹೆಚ್ಚು ತತ್ವಪದಗಳನ್ನು

ಬರೆದಿದ್ದಾರೆ.

ಲಿಂಗಯ್ಯನವರು ಪ್ರಾಥಮಿಕ ಶಿಕ್ಷಣವನ್ನು ತುರುವನೂರಿನಲ್ಲೇ ಮುಗಿಸಿದರು. ಮುಂದೆ 1920ರಲ್ಲಿ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಇಡೀ ಚಿತ್ರದುರ್ಗ ಜಿಲ್ಲೆಗೆ ಪ್ರಥಮ ರ್‍ಯಾಂಕ್ ಪಡೆದು ತೇರ್ಗಡೆ ಹೊಂದಿದರು. ಲಿಂಗಯ್ಯನವರಿಗೆ ಒಂದು ಕಡೆ ಶಾಲೆಯಲ್ಲಿ ಕಲಿತ ವೈಚಾರಿಕ ಶಿಕ್ಷಣ ಮತ್ತೊಂದು ಕಡೆ ಮನೆಯಲ್ಲಿ ತಮ್ಮ ತಂದೆಯವರಿಂದ ಕಲಿತ ಆಧ್ಯಾತ್ಮಿಕ ಶಿಕ್ಷಣ ಇವೆರಡು ಇವರ ಭೌತಿಕತೆಯನ್ನು ಪ್ರಭಾವಿಸಿದವು ಮತ್ತು ಬೆಳೆಸಿದವು. ಹಾಗೆ ನೋಡಿದರೆ ಲಿಂಗಯ್ಯನವರಿಗೆ ಶಾಲಾ ಶಿಕ್ಷಣಕ್ಕಿಂತ ತಂದೆಯವರಿಂದ ಕಲಿತ ಆಧ್ಯಾತ್ಮಿಕ ಶಿಕ್ಷಣವೇ ಇವರ ಹೃದಯ ಮತ್ತು ಮನಸ್ಸನ್ನು ಪ್ರಭಾವಿಸಿತು ಹಾಗೂ ಅರಳಿಸಿತು. ಲಿಂಗಯ್ಯನವರು ಪ್ರತಿದಿನ ರಾತ್ರಿ ತಂದೆಯವರಾದ ವೀರಪ್ಪನವರಿಂದ ಧಾರ್ಮಿಕ ಕಥೆಗಳನ್ನು ಕೇಳದೆ ನಿದ್ದೆಯೇ ಮಾಡುತ್ತಿರಲಿಲ್ಲ. ಇದು ಲಿಂಗಯ್ಯನವರ ಜ್ಞಾನದ ಹಸಿವನ್ನು ಜಾಸ್ತಿ ಮಾಡಿತು. ಇವರು 1923ರಲ್ಲಿ ತಮ್ಮ 18ನೇ ವಯಸ್ಸಿನಲ್ಲಿ ಲಕ್ಷ್ಮಮ್ಮನವರನ್ನು ಮದುವೆಯಾದರು. ದಿನಾಂಕ: 01/07/1920ರಂದು ಇವರು ಶಾಲಾ ಶಿಕ್ಷಕರಾಗಿ ನೇಮಕವಾದರು. ದಿನಾಂಕ: 04/05/1958ರವರೆಗೆ ಸರಿಸುಮಾರು 35 ವರ್ಷಗಳ ಕಾಲ ಆದರ್ಶ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಲಿಂಗಯ್ಯನವರ ಕುಟುಂಬವನ್ನು ಕುರಿತು ಮಾತನಾಡಬೇಕಾದರೆ ಅವರದು ನೊಂದವರ ಬಳಗ. ಆದರೆ ಲಿಂಗಯ್ಯನವರು ನೊಂದವರ ಬಳಗದ ಜೊತೆಗೆ ಕಟ್ಟಿಕೊಂಡಂತಹ ಜೀವನವನ್ನು ನಾವು ಗಮನಿಸಬಹುದು. ಈ ಬಳಗದ ಕುರಿತು ಬೇಂದ್ರೆಯವರ ಒಂದು ಮಾತು ನೆನಪಾಗುತ್ತದೆ. 'ಜೇನು ಇಲ್ಲದ್ದು ಹುಟ್ಟಲ್ಲ. ಪ್ರೀತಿಯಿಲ್ಲದ್ದು ಬಳಗವಲ್ಲ.!' ಪ್ರೀತಿಯಿಲ್ಲದಿದ್ದರೆ ಏನು ಪ್ರಯೋಜನವಿಲ್ಲ. ಪ್ರತಿಯೊಬ್ಬ ಶ್ರೀಸಾಮಾನ್ಯನನ್ನು ಪ್ರೀತಿಯಿಂದಲೇ ಕಾಣುವ ಗುಣ ಲಿಂಗಯ್ಯನವರಲ್ಲಿ ವಂಶಪಾರಂಪರ್ಯ ದತ್ತವಾಗಿ ಬಂದಿದೆ ಎಂಬುದು ಈ ಸಂದರ್ಭದಲ್ಲಿ ಕಾಣಬಹುದು.

ಲಿಂಗಯ್ಯನವರು ಹೆಚ್ಚಿನದಾಗಿ ಸಮಾಜದ ಕಡೆ ಮುಖ ಮಾಡಿ ಚಲಿಸಿದ್ದೆ ಅಪಾರ. ಅವರನ್ನು ಸಮಾಜ ಸುಧಾರಕರಾಗಿ ತೊಡಗಿಸಿಕೊಳ್ಳಲು ಅನೇಕ ಘಟನೆಗಳು ಇರುವುದನ್ನು ಗಮನಿಸಬಹುದು. ಅಂತಹ ಘಟನೆಗಳಲ್ಲಿ 1927ರಿಂದ 1930ರವರೆಗೆ ಚಿತ್ರದುರ್ಗ ಜಿಲ್ಲೆಯ ಮಾಡನಾಯ್ಕನ ಹಳ್ಳಿಯಲ್ಲಿ ಶಿಕ್ಷರಾಗಿ ಕಾರ್ಯ ನಿರ್ವಹಿಸುವ ಸಂದರ್ಭದ ಅನೇಕ ಉದಾಹರಣೆಗಳಲ್ಲಿ ಮುಖ್ಯವಾಗಿ ವಿಧವೆಯಾದ ಹೆಣ್ಣು ಮಗು ವಿವಾಹವಾಗಬಾರದೆಂಬ ಕಟ್ಟಳೆ ಹಿಂದೂ ಸಮಾಜದಲ್ಲಿ ಅದರಲ್ಲೂ ಕುರುಬ ಸಮಾಜದಲ್ಲಿ ಬಹುವಾಗಿ ಕಾಡುತ್ತಿದ್ದ ಸಮಯದಲ್ಲಿ ವಿಧವೆಯರ ಮರು ವಿವಾಹಗಳಿಗಾಗಿ ಬಹುವಾಗಿ ಶ್ರಮಿಸಿದ ಕೀರ್ತಿ ಲಿಂಗಯ್ಯನವರದು. ಈ ಬಗ್ಗೆ ಅನೇಕ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಸಭೆಗಳಲ್ಲಿ ಅವರು ಭಾಗವಹಿಸಿ ಜನ ಜಾಗೃತಿಗೊಳಿಸಿದ

ಅನೇಕ ಉದಾಹರಣೆಗಳನ್ನು ಕಾಣಬಹುದು.

ಲಿಂಗಯ್ಯನವರ ಬದುಕು ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲದಲ್ಲಿ ವಿಸ್ತರಿಸಿಕೊಂಡಿದೆ. ಈ ಕಾಲದ ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡುವವರು ಸ್ವಾತಂತ್ರ್ಯಪೂರ್ವದ ಕನ್ನಡ ಸಾಹಿತ್ಯ ಮತ್ತು ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಎಂಬುದಾಗಿ ಎರಡು ವಿಭಾಗ ಮಾಡುತ್ತಾರೆ. ಈ ಎರಡು ವಿಭಾಗಗಳಿಗೆ ನಿರ್ದಿಷ್ಟವಾದ ಮತ್ತು ಖಚಿತವಾದ ಲಕ್ಷಣಗಳನ್ನು ಆರೋಪಿಸುತ್ತಾರೆ. ಇದು ಈಗಾಗಲೇ ಕನ್ನಡದ ಅಕಾಡೆಮಿಕ್ ವಲಯದಲ್ಲಿ ಜನಜನಿತವಾದ ಒಪ್ಪಿತ ಧೋರಣೆಯಾಗಿದೆ ಮತ್ತು ತೀರ್ಮಾನವಾಗಿದೆ. ಆದರೆ ಲಿಂಗಯ್ಯನವರ ಯಾವುದೇ ಸಾಹಿತ್ಯ ಪ್ರಕಾರವನ್ನು ಅಧ್ಯಯನ ಮಾಡುವಾಗ ಈ ಪೂರ್ವ ನಿರ್ಧಾರಿತ ಚೌಕಟ್ಟು ಸಹಜವಾಗಿ ನಿರುಪಯುಕ್ತವಾಗುತ್ತದೆ. ಇವರು ಒಂದು ಕಡೆ ಲಿಖಿತ ಸಾಹಿತ್ಯವನ್ನು ಓದಿದರೂ ಕೂಡ ಲಿಖಿತ ಸಾಹಿತ್ಯದ ಪ್ರಭಾವ ಇವರ ಸಾಹಿತ್ಯ ರಚನೆಯನ್ನು ರೂಪುಗೊಳಿಸಿದ್ದರೂ ಕೂಡ ಮೇಲಿನ ಪೂರ್ವ ನಿರ್ಧಾರಿತ ಚೌಕಟ್ಟುಗಳ ಮೂಲಕ ಲಿಂಗಯ್ಯನವರ ಸಾಹಿತ್ಯವನ್ನು ಅವಲೋಕನ ಮಾಡಲು ಮತ್ತು ಮೌಲ್ಯಮಾಪನ ಮಾಡಲು ಬರುವುದಿಲ್ಲ. ಈ ದೃಷ್ಟಿಯಿಂದ ಲಿಂಗಯ್ಯನವರ ಸಾಹಿತ್ಯ ಅಧ್ಯಯನಕ್ಕೆ ಮತ್ತು ಅದರಲ್ಲೂ ಮುಖ್ಯವಾಗಿ ಇವರ ತತ್ವಪದ ಸಾಹಿತ್ಯವನ್ನು ಚರ್ಚೆ ಮಾಡಲು ಬರುವುದಿಲ್ಲ. ಇವರ ತತ್ವಪದ ಸಾಹಿತ್ಯವನ್ನು ಅಧ್ಯಯನ ಮಾಡಲು ಇದಕ್ಕಿಂತ ಭಿನ್ನವಾದ ಹಾಗೂ ಬೇರೆಯಾದ ತಾತ್ವಿಕತೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಸ್ವಾತಂತ್ರ್ಯಪೂರ್ವದ ಕನ್ನಡ ಸಾಹಿತ್ಯ ರಚನೆಯ ಮೇಲೆ ಸ್ವಾತಂತ್ರ್ಯ ಹೋರಾಟದ ಪ್ರಭಾವ ನಿಚ್ಚಳವಾಗಿ ಇದೆ ಎಂದು ಮತ್ತು ಸ್ವಾತಂತ್ರ್ಯೋತ್ತರ ಸಾಮಾಜಿಕ ಬೆಳವಣಿಗೆಯ ನಿಚ್ಚಳವಾದ ಪ್ರಭಾವ ಇದೆ ಎಂಬ ತೀರ್ಮಾನವನ್ನು ಇವರ ಸಾಹಿತ್ಯವನ್ನು ಕುರಿತ ಅಧ್ಯಯನದ ಸಂದರ್ಭದಲ್ಲಿ ಬದಿಗಿಡಬೇಕಾಗುತ್ತದೆ. ಹಾಗಾದರೆ ಲಿಂಗಯ್ಯನವರ ಒಟ್ಟಾರೆ ಸಾಹಿತ್ಯವನ್ನು ಅದರಲ್ಲೂ ಮುಖ್ಯವಾಗಿ ಇವರು ರಚನೆ ಮಾಡಿರುವ ತತ್ವಪದ ಸಾಹಿತ್ಯವನ್ನು ಹೇಗೆ ಅಧ್ಯಯನ ಮಾಡಬೇಕು ಹಾಗೂ ಅಧ್ಯಯನ ಮಾಡಬಹುದು ಎಂಬ ಸಾಧ್ಯತೆಗಳನ್ನು ಹೊಸದಾಗಿ ರೂಪಿಸಿಕೊಳ್ಳಬೇಕಾಗುತ್ತದೆ.

ಲಿಂಗಯ್ಯನವರ ತತ್ವಪದ ಸಾಹಿತ್ಯ ಅಧ್ಯಯನಕ್ಕೆ ಮೇಲಿನ ಎರಡು ಪ್ರಭಾವಗಳು ಸಿದ್ಧಮಾದರಿಯಲ್ಲಿ ದಕ್ಕುವುದಿಲ್ಲ ಮತ್ತು ಇವರ ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡುವಾಗ ಈ ಪೂರ್ವ ನಿರ್ಧಾರಿತ ಚೌಕಟ್ಟುಗಳು ಉಪಯೋಗಕ್ಕೆ ಬರುವುದಿಲ್ಲ. ಇದು ಕೆ. ಲಿಂಗಯ್ಯನವರ ಸಾಹಿತ್ಯ ಅಧ್ಯಯನಕ್ಕೆ ಭದ್ರವಾದ ತಾತ್ವಿಕ ಬುನಾದಿಯನ್ನು ಹಾಕಿಕೊಳ್ಳಲು ಸೂಕ್ತವಾದ ಸಾಮಾಜಿಕ ಪ್ರೇರಣೆಯಾಗಿದೆ. ಪ್ರಧಾನವಾಗಿ ಮತ್ತು ಮೂಲತಃ ತತ್ವಪದ ಸಾಹಿತಿಗಳಾದ ಲಿಂಗಯ್ಯನವರ ಲೋಕಗ್ರಹಿಕೆ ಭಿನ್ನವಾದುದು ಮತ್ತು ವಿಶೇಷವಾದುದು. ಇವರ ಲೋಕಗ್ರಹಿಕೆಯ

ವಿಶಿಷ್ಟತೆಯನ್ನು ಮತ್ತು ಭಿನ್ನತೆಯನ್ನು ಇವರು ರಚನೆ ಮಾಡಿರುವ ತತ್ವಪದಗಳ ಆಯ್ದ ಭಾಗಗಳ ಉಲ್ಲೇಖಗಳೊಂದಿಗೆ ಚರ್ಚೆ ಮಾಡಬಹುದು.

**ವೈದಿಕರೆನ್ನುವ ನಾವೆಲ್ಲಾ । ನಿಜ ।**
**ವೇದಗಳರ್ಥವನರಿತಿಲ್ಲಾ**
**ವಾದದೊಳಗೆ ಕುಳಿತಿಹೆವಲ್ಲಾ । ಬಲು ।**
**ಭೇದದ ಭಾವವೆ ಹೋಗಿಲ್ಲಾ**

**ಶಿವನ ವಿಚಾರವ ತಿಳಿದಿಲ್ಲಾ । ಅನು ।**
**ಭವಿಗಳ ನುಡಿಗಳು ಹೊಳೆದಿಲ್ಲಾ ॥**
**ಭವಮಾಲೆಯನೇ ಕಡಿದಿಲ್ಲ । ವೈ ।**
**ಭವ ಸುಜ್ಞಾನವ ಪಡೆದಿಲ್ಲಾ**

**ಜಾತಿಯ ಭೇದವು ಹೋಗಿಲ್ಲಾ । ಸ ।**
**ನ್ನೀತಿಯ ಸ್ವಾದವು । ತಾಗಿಲ್ಲಾ ।**
**ಮಾತೇ ಮಂತ್ರಗಳಾಗಿಲ್ಲಾ । ಸಂ ।**
**ಪ್ರೀತಿಯ ತಂತ್ರವು ಸಾಗಿಲ್ಲಾ**

**ನಾನೀನೆಂಬುದು ಬಿಟ್ಟಿಲ್ಲಾ । ಅ ।**
**ಜ್ಞಾನದ ಭಾವವ ಸುಟ್ಟಿಲ್ಲಾ ॥**
**ಧ್ಯಾನವು ಮನವನು ಮುಟ್ಟಿಲ್ಲಾ । ಸು ।**
**ಜ್ಞಾನವ ನರಹರಿ ಕೊಟ್ಟಿಲ್ಲಾ**

ಮೇಲೆ ಉಲ್ಲೇಖಿಸಿದ ಲಿಂಗಯ್ಯನವರ ವೈದಿಕರೆನ್ನುವ ನಾವೆಲ್ಲ ತತ್ವಪದವು ವೈದಿಕರನ್ನು ಮತ್ತು ವೈದಿಕತೆಯನ್ನು ಒಳಗಿನಿಂದಲೇ ಗ್ರಹಿಸಿದೆ, ಅರ್ಥೈಸಿದೆ ಮತ್ತು ಈ ಅರ್ಥ ವಿವರಣೆಯ ತಾತ್ವಿಕತೆಯ ಒಳಗೆ ನಿಂತು ಅದರ ಮಿತಿಗಳನ್ನು ಮತ್ತು ಅದರ ಆಚರಣೆಯನ್ನು ಕುರಿತು ಗಂಭೀರವಾಗಿ ಪ್ರಶ್ನೆಗಳನ್ನು ಎತ್ತಿದೆ. ಲಿಂಗಯ್ಯನವರ ಪ್ರಕಾರ ವೈದಿಕತೆ ಎಂಬುದರಲ್ಲಿ ವಾದ ಇರಬಾರದು, ಭೇದ-ಭಾವ ಇರಬಾರದು, ಶಿವನ ವಿಚಾರ ತಿಳಿಯದೆ ಇರಬಾರದು, ಜಾತಿ ತಾರತಮ್ಯವನ್ನು ಮಾಡಬಾರದು, ಮಾತುಗಳು ನಡೆಯಾಗದೆ ಇರಬಾರದು, ಒಳ್ಳೆಯ ಜ್ಞಾನವು ನಮ್ಮನ್ನು ಕೈ ಹಿಡಿದು ನಡೆಸಬೇಕು. ಆದರೆ ಈ ವೈಚಾರಿಕ ಚೌಕಟ್ಟಿನ ಒಳಗಡೆ ಯಾವುದೂ ಕೂಡ ಆಚರಣೆಗೆ ಬಂದಿಲ್ಲ. ಹಾಗಿದ್ದರೆ ನಾವೆಲ್ಲರೂ ವೈದಿಕರು ಎನ್ನಬಹುದೇ? ಎಂಬ ಬಹಳ ಮುಖ್ಯವಾದ ಮತ್ತು ಬಹಳ ಗಂಭೀರವಾದ ಪ್ರಶ್ನೆಯನ್ನು ಮೇಲಿನ ಇವರ ತತ್ವಪದ ಎತ್ತಿದೆ. ಲಿಂಗಯ್ಯನವರು ತಮ್ಮ ತತ್ವಪದದ ಮೂಲಕ ಈ ಹೊತ್ತು ಎತ್ತಿದ ಈ ಪ್ರಶ್ನೆ ಇವತ್ತಿಗೂ ಕೂಡ ಪ್ರಸ್ತುತ. ಈ ದೃಷ್ಟಿಯಿಂದ ಲಿಂಗಯ್ಯನವರ ತತ್ವಪದ

ಸಾಹಿತ್ಯದ ಶಕ್ತಿ ಎಷ್ಟು ಎಂಬುದು ಗೊತ್ತಾಗುತ್ತದೆ.

ಮೈಲಿಗೆಯಾಗದ ಮಡಿ ಮಾಡಯ್ಯಾ ।
ಮೂಲವರಿತು ಭವ ಕಡೆ ಮಾಡಯ್ಯಾ
ಶೀಲ ಸಜ್ಜನತನ ಮಡಿ ಕಾಣಯ್ಯ ।
ಮೈಲಿಗೆಯೆಂಬುದೆ ದುರ್ಗುಣವಯ್ಯಾ

ಮೈಲಿಗೆ ತನುವಿಗೆ ಮಡಿಯಿನ್ಯಾಕೆ ।
ಮೈಲಿಗೆಯಾಗದಾತ್ಮಗೆ ಮಡಿ ಬೇಕೆ ।
ಮೈಲಿಗೆ ಮನವನು ತೊಳೆದಿಡು ಜೋಕೆ ।
ಮೈಲಿಗೆ ತನುವನು ತೊಳೆದರೆ ಸಾಕೆ

ಮಲಭಾಂಡವನು ತೊಳೆದರೆ ಏನು ॥
ಬಳಸಲು ನಿರ್ಮಲವೆನಿಪುದೆ ತಾನು ॥
ಕೊಳಕಿನ ದೇಹವ ತೊಳೆದರೆ ಏನು ॥
ಸುಲಲಿತ ಮಡಿಯೆಂದೆನಿಪುದೆ ತಾನು

ತನುವನು ತೊಳೆವುದು ಆರೋಗ್ಯಕ್ಕೆ ॥
ಮನವನು ತೊಳೆವುದು ವೈರಾಗ್ಯಕ್ಕೆ ॥
ಅನುದಿನ ಶ್ರವಣವೆ ನಿರ್ಮಲ ಮಡಿಯು ॥
ಮನವನ ಮಾಳ್ಪುದು ಪಾವನ ಮಡಿಯು

ನಿರ್ಮಲ ಚಿತ್ತವ ಮಡಿ ಕಾಣಯ್ಯ ।
ದುರ್ಮಲ ಚಿತ್ತವ ಮೈಲಿಗೆಯಯ್ಯ ॥
ಧರ್ಮದ ನಡತೆಯೆ ಮಡಿ ನೋಡಯ್ಯ ॥
ನಿರ್ಮಲ ಭಾವದ ಮಡಿ ಮಾಡಯ್ಯಾ

ಸನ್ನುಡಿಯೇ ಮಡಿದುರ್ನುಡಿ ಮೈಲಿಗೆ ।
ಸನ್ನಡತೆಯೆ ಮಡಿ ದುರ್ನಡೆ ಮಲಿನಾ ॥
ಮನ್ನಣೆ ಮಡಿಯಪಮಾನವೆ ಮೈಲಿಗೆ
ವಂದನೆ ಮಡಿಯು ನಿಂದನೆ ಮೈಲಿಗೆ

ಕಾಮವೆ ಮೈಲಿಗೆ ನಿಷ್ಕಾಮವೆ ಮಡಿ ।
ತಾಮಸ ಮೈಲಿಗೆ ಸಾತ್ವಿಕವೇ ಮಡಿ ॥
ವ್ಯಾಮೋಹ ಮೈಲಿಗೆ ನಿರ್ಮೋಹವೆ ಮಡಿ ।
ಸೋಮೇಶ ಗುರುವರ ಬೋಧಯೆ ಮಡಿ

**ಮೈಲಿಗೆಯಿಲ್ಲದ ಮಡಿ ಹರಿಧ್ಯಾನ।**
**ಮೂಲದ ಬ್ರಹ್ಮಕೆ ನುಡಿ ಸಂಧಾನ॥**
**ಮೂಲಾಧಾರದ ಬ್ರಹ್ಮದ ಜ್ಞಾನ।**
**ಪೇಳಿದ ನರಹರಿನುಡಿಮಡಿ ಜಾಣ**

ಮಡಿ ಮೈಲಿಗೆ ಎಂಬುದು ಮನುಷ್ಯರ ಮನಸ್ಸಿಗೆ ಮತ್ತು ಮನುಷ್ಯರ ಪ್ರಜ್ಞೆಗೆ, ಮನುಷ್ಯರ ಸ್ವಭಾವಕ್ಕೆ ಹಾಗೂ ಮನುಷ್ಯರ ವರ್ತನೆಗೆ ಸಂಬಂಧಪಟ್ಟ ಮೂಲ ಸಂವೇದನೆಗೆ ಸಂಬಂಧಪಟ್ಟಿದ್ದು. ಮಡಿ–ಮೈಲಿಗೆಯ ಪ್ರಜ್ಞೆಯು ಮನುಷ್ಯರ ಇಂದ್ರಿಯಗಳ ಸ್ಥರಕ್ಕೆ ಸಂಬಂಧಿಸಿದ್ದು. ಮುಂದುವರೆದು ಮನುಷ್ಯರ ಸಂವೇದನೆಗಳಿಗೆ ಸಂಬಂಧಿಸಿದ್ದು. ಯಾವಾಗ ಮನುಷ್ಯರ ಮಡಿ–ಮೈಲಿಗೆ, ಶ್ರೇಷ್ಠ–ಕನಿಷ್ಠ, ಮೇಲು–ಕೀಳು, ನಾವು–ಅವರು ಈ ಬಗೆಯ ದ್ವಿದಾ ಭಾವವನ್ನು ನಮ್ಮ ಮನಸ್ಸಿನಲ್ಲಿ ಹುಟ್ಟಿಸುತ್ತದೆ ಮತ್ತು ಮನಸ್ಸಿನಲ್ಲಿ ಅದನ್ನು ಗಟ್ಟಿಗೊಳಿಸುತ್ತದೆ. ಮನುಷ್ಯರ ಮನೋಲೋಕದಲ್ಲಿ, ಪ್ರಜ್ಞೆಯಲ್ಲಿ ಹುಟ್ಟಿದ ಈ ಮಡಿ–ಮೈಲಿಗೆ ಮೌಲ್ಯಗಳ ಸಾಮಾಜಿಕ ಮೌಲ್ಯಗಳಾಗಿ ರೂಪಾಂತರ ಹೊಂದುತ್ತವೆ. ಸಮಾಜದಲ್ಲಿ ಕೂಡ ಮೇಲು–ಕೀಳು, ಶ್ರೇಷ್ಠ–ಕನಿಷ್ಠ ಈ ಬಗೆಯ ಅಸಮಾನತೆಯ ಪ್ರಜ್ಞೆಯ ಮತ್ತು ಅಸಮಾನತೆಯ ಮೌಲ್ಯವನ್ನು ನಿರ್ಮಾಣ ಮಾಡುತ್ತವೆ. ಮುಂದುವರೆದು ಈ ಅಸಮಾನತೆಯ ವ್ಯಕ್ತಿಗಳ ಗುಣವಾಗಿ, ವ್ಯಕ್ತಿಗತ ಸ್ವಭಾವ, ವ್ಯಕ್ತಿಗತ ವರ್ತನೆಯಾಗಿ, ಸಾಮಾಜಿಕ ರಚನೆಯಲ್ಲಿ ಬೇರು ಬಿಡುತ್ತವೆ. ಇದು ಎಲ್ಲ ಬಗೆಯ ಅನಾಹುತಗಳಿಗೆ ಕಾರಣವಾಗುತ್ತದೆ. ಲಿಂಗ ತಾರತಮ್ಯದ ನೆಲೆಯಲ್ಲಿ ಗಂಡು–ಹೆಣ್ಣು, ಜಾತಿ ಅಸಮಾನತೆಯ ನೆಲೆಯಲ್ಲಿ ಮೇಲುಜಾತಿ–ಕೆಳಜಾತಿ ಆರ್ಥಿಕ ಒಡೆತನದಲ್ಲಿ ಶ್ರೀಮಂತ ಮತ್ತು ಬಡವ ಈ ಬಗೆಯ ಅಸಮಾನತೆಯ ಪ್ರಜ್ಞೆ ಇಡೀ ಸಮಾಜವನ್ನು ಹಾಗೂ ಇಡೀ ಮಾನವ ಕುಲವನ್ನು ಆವರಿಸುತ್ತದೆ. ಈ ಅಸಮಾನತೆಯ ವಿರುದ್ದವೇ ಬುದ್ಧ, ಬಸವಣ್ಣ, ಡಾ. ಬಾಬ ಸಾಹೇಬ್ ಅಂಬೇಡ್ಕರ್, ಪಂಪ, ವಚನಕಾರರು, ಕುವೆಂಪು, ಮಹಿಳಾ ಸಾಹಿತ್ಯ, ದಲಿತ–ಬಂಡಾಯ ಸಾಹಿತ್ಯ ದೊಡ್ಡ ಪ್ರತಿರೋಧವನ್ನು ವ್ಯಕ್ತಪಡಿಸಿದೆ. ಇದು ಏನನ್ನು ಸೂಚಿಸುತ್ತದೆ ಎಂದರೆ ಲಿಂಗಯ್ಯನವರ ತತ್ವಪದ ಸಾಹಿತ್ಯ ಚಾರಿತ್ರಿಕವಾಗಿ ಒಂದು ನಿರ್ದಿಷ್ಟ ಕಾಲಘಟ್ಟಕ್ಕೆ ಸೀಮಿತವಾಗದೆ, ಇದು ಕಾಲಾತೀತವಾದ ಮನುಷ್ಯ ಸಂಬಂಧಗಳನ್ನು ಅತ್ಯಂತ ಆರೋಗ್ಯಕರವಾಗಿ ಮತ್ತು ಸಮಾನತೆಯ ಭಾವದಲ್ಲಿ ಕಟ್ಟುವುದು ಹೇಗೆ ಹಾಗೂ ಪುನರ್ ರಚನೆ ಮಾಡುವುದು ಹೇಗೆ ಎಂಬುದರ ಕಡೆಗೆ ತನ್ನ ಆಸಕ್ತಿಯನ್ನು ಕೇಂದ್ರೀಕರಿಸುತ್ತದೆ.

**ಬಡತನ ಕೊಟ್ಟೆ ಯಾತಕ್ಕೆ ಶಿವನೆ ।**
**ಬಿಡದು ಮುಂದಕ್ಕೆ ಯನಗೆ ಮಾರ್ಗವನೆ**
**ಒಡಲ ಕರ್ಮಕ್ಕೆ ಶಿಕ್ಷೆಯೆಂದಿದನೆ ।**
**ಕೊಡುವೆ ನೀನೆಂದು ನಂಬಿರುವೆ ನಾನೆ**

ಬರುವ ದುಃಖಕ್ಕೆ ಕಡೆಯೆಂಬುದಿಲ್ಲ ।
ತೆರುವ ಲೆಕ್ಕಕ್ಕೆ ತಡೆಯೆಂಬುದಿಲ್ಲ ॥
ಸುರಿವ ಕಣ್ಣೀರ ಮಳೆ ನಿಲ್ಲಲಿಲ್ಲ ।
ಹರನೆ ನಿನಗೇಕೆ ಕಾರುಣ್ಯವಿಲ್ಲ

ದಟ್ಟ ದಾರಿದ್ರ್ಯ ಬೆಟ್ಟವಾಗಿಹುದು ।
ಕುಟ್ಟಿಕೊಂಡಳಲು ಬಿಟ್ಟು ಹೋಗದಿರು ॥
ತುಟ್ಟ ತುದಿತನಕ ಗಟ್ಟಿಯಾಗಿಹುದು ।
ಅಟ್ಟಿ ಬಂದೆನ್ನ ಸುಟ್ಟು ಹಾಕುವುದು

ಪರರ ಚಾಕರಿಗೆ ತನುವನ್ನು ತೆತ್ತೆ ।
ಕರುಳು ಸುಡುವಂಥ ದುಃಖವ ಹೊತ್ತೆ ॥
ನರಳಿ ರೋಗರುಜಿನದಿಂದ ಸತ್ತೆ ।
ನರಹರಿಯೆ ಸಾಕು ಜನ್ಮವೆನ್ನುತ್ತೆ॥

ಜಗತ್ತಿನ ಕಲೆ ಮತ್ತು ಸಾಹಿತ್ಯ ಬಡತನವನ್ನು ಸ್ಪರ್ಶಿಸದೇ ಹುಟ್ಟುವುದಿಲ್ಲವೇನೋ ಎಂಬಷ್ಟರ ಮಟ್ಟಿಗೆ ಬಡತನದ ಸ್ಥಿತಿಯೊಂದಿಗೆ ಇದರ ಕರುಳುಬಳ್ಳಿ ಸಂಬಂಧವಿದೆ. ಕವಿಗಳು ಮತ್ತು ಕಲಾವಿದರು ಬಡವರಾಗಿರುತ್ತಾರೋ ಇಲ್ಲವೋ ಎಂಬ ಪ್ರಶ್ನೆ ಇಲ್ಲಿ ಮುಖ್ಯವಲ್ಲ. ಆದರೆ ವರಕವಿ ಬೇಂದ್ರೆಯವರು ಕೇಳುವ 'ಬಡತನವು ಸಾಹಿತ್ಯದ ವಸ್ತುವು ಯಾಕಾಗಬೇಕು ಎಂಬಷ್ಟರ ಮಟ್ಟಿಗೆ ಕಲೆ ಮತ್ತು ಸಾಹಿತ್ಯ ಬಡತನದ ಮಟ್ಟಿಗೆ ಧ್ಯಾನಿಸಿದೆ, ಆಲೋಚಿಸಿದೆ, ಚಿಂತಿಸಿದೆ ಮತ್ತು ವ್ಯಾಖ್ಯಾನಿಸಿದೆ. ಇನ್ನು ಮುಂದುವರೆದು ಹೇಳುವುದಾದರೆ ಕಲೆ ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟ ಹಾಗೆ ಇದೊಂದು ವಿಶ್ವಾತ್ಮಕವಾದ ಸಂವೇದನೆಯೂ ಆಗಿರಬಹುದು. ಮೇಲೆ ಉಲ್ಲೇಖಿಸಿದ ತತ್ವಪದವು ಮತ್ತು ಲಿಂಗಯ್ಯನವರ ತತ್ವಪದಗಳು ಇದರ ಪ್ರತಿಧ್ವನಿಯಾಗಿ ಕೆಲಸ ಮಾಡುತ್ತವೆ.

**ಪರಾಮರ್ಶನ ಗ್ರಂಥಗಳು:**


1. ಎರ್ರಿಸ್ವಾಮಿ ಎನ್. ಟಿ. (2016). ಅಡವಿ ಬೆಳದಿಂಗಳು. ಗೀತಾಂಜಲಿ ಪುಸ್ತಕ ಪ್ರಕಾಶನ. ಶಿವಮೊಗ್ಗ.
2. ನಟರಾಜ್ ಬೂದಾಳು ಎಸ್. (ಸಂ). (2017). ತುರುವನೂರು ಲಿಂಗಾರ್ಯರ ತತ್ವಪದಗಳು: ಭಾಗ–1. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
3. ನಟರಾಜ್ ಬೂದಾಳು ಎಸ್. (ಸಂ). (2017). ತುರುವನೂರು ಲಿಂಗಾರ್ಯರ ತತ್ವಪದಗಳು: ಭಾಗ–2. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
4. ಹಳ್ಳಿಕೇರಿ ಎಫ್. ಟಿ. (2019). ಹಾಲುಮತ ಸಂಸ್ಕೃತಿ: 2. ಯಾಜಿ ಪ್ರಕಾಶನ. ಹೊಸಪೇಟೆ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.